ಶ್ರೀ ಕೆ.ಬಿ. ಮಲ್ಲಿಕಾರ್ಜುನ:– ಇವತ್ತು ಇವರ ಹತ್ತಿರ ಯಾವ್ಯಾವ ಬೀಜಗಳಿವೆ ಎನ್ನುವ ಮಾಹಿತಿ ಬೇಕು; ಸಬ್ಸಿಡಿ ಹಾಗೂ ಸಾಲ ಕೊಡುವ ಬಗ್ಗೆ ನಾಳೆ ಬೇಕಾದರೆ ಹೇಳಿ, ಇವತ್ತು ಶಾರ್ಟ್ ಟರ್ಮ್ ಕ್ರಾಪ್ಸ್‌ಗಳು ಯಾವುವು ಇವೆ, ನಾಳೆ ದಿವಸ ಇಂತಿಂಥ ಬೀಜಗಳಿವೆ ಎನ್ನುವುದನ್ನು ಪ್ರಕಟಣೆ ಮಾಡಬೇಕಾಗುತ್ತದೆ. ಇದು ಕೃಷಿ ಇಲಾಖೆಗೆ ನೇರವಾಗಿ ಸಂಬಂಧಿಸಿದ ವಿಷಯವಾಗಿದೆ. ಇದನ್ನು ಮಾಡದಿದ್ದರೆ ನಮ್ಮ ಚರ್ಚೆಯೆಲ್ಲಾ ವ್ಯರ್ಥವಾಗುತ್ತದೆ.

ಶ್ರೀ ವಿ.ಎಸ್. ಕೌಜಲಗಿ:– ನಾನು ಸಹಕಾರ ಸಚಿವರೊಡನೆ ಚರ್ಚೆ ಮಾಡಿ ಹೇಳುತ್ತೇನೆಂದು ಈಗಾಗಲೇ ಹೇಳಿದ್ದೇನೆ.

ಅಧ್ಯಕ್ಷರು:– ಅದಕ್ಕೆ ನಾಳೆ ಉತ್ತರ ಹೇಳುತ್ತಾರೆ; ರೇಷ್ಮೆ ಸಚಿವರಾದ ಮಾನ್ಯ ರೇವಣ್ಣನವರೆ, ಅನೇಕ ಮಾನ್ಯ ಸದಸ್ಯರುಗಳು ಈ ರೇಷ್ಮೆ ಬೆಳೆ ಬಗ್ಗೆ ತಮ್ಮ ತಮ್ಮ ಕಷ್ಟಗಳನ್ನು ಹೇಳಿದ್ದಾರೆ, ದಯವಿಟ್ಟು ಅದಕ್ಕೆ ಉತ್ತರ ಹೇಳಿ.

(ಈ) ರಾಜ್ಯದ ರೇಷ್ಮೆ ಬೆಳೆ ಹಾಗೂ ಉದ್ಯಮದ ಕುರಿತು ಮಾನ್ಯ ರೇಷ್ಮೆ ಸಚಿವರಿಂದ ಉತ್ತರ

ಶ್ರೀ ಹೆಚ್.ಎಂ. ರೇವಣ(ರೇಷ್ಮೆ ಸಚಿವರು):– ಮಾನ್ಯ ಸಭಾಧ್ಯಕ್ಷರೆ, ನಿನ್ನೆ ಕರ್ನಾಟಕ ರಾಜ್ಯದಲ್ಲಿ ರೈತರ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಾ ಮಾನ್ಯ ಕೆ. ಶ್ರೀನಿವಾಸಗೌಡರು ಹಾಗೂ ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಮತ್ತು ಮಾನ್ಯ ಹೆಚ್.ಎಸ್. ಮಹಾದೇವ ಪ್ರಸಾದ್‌ರವರು ಈ ರಾಜ್ಯದಲ್ಲಿ ರೇಷ್ಮೆ ಉದ್ಯಮದಲ್ಲಿರುವ ರೇಷ್ಮೆ ಬೆಳೆಗಾರರು, ರೀಲರ್ಸ್, ಟ್ವಿಸ್ಟರ್ಸ್ ವಿವಿಧ ಹಂತದಲ್ಲಿರುವ ಕೆಲಸಗಾರರು ಪಡುತ್ತಿರುವ ಸಂಕಷ್ಟದ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಈ ವಿಷಯದಲ್ಲಿ ಕರ್ನಾಟಕ ರಾಜ್ಯ ರೇಷ್ಮೆ ಬೆಳೆ ಹಾಗೂ ಉದ್ಯಮದಲ್ಲಿ ಮೈಸೂರು ರೇಷ್ಮೆ ಉದ್ಯಮ ಪ್ರಪಂಚದಲ್ಲೇ ಹೆಸರು ಪಡೆದಂಥ ಒಂದು ಉದ್ಯಮ, ಎಲ್ಲರ ಗಮನವನ್ನು ಸೆಳೆದಿದೆ. ಇವತ್ತು ಕೇಂದ್ರದ ಆಮದು ನೀತಿಯಿಂದಾಗಿ ಮುಕ್ತ ಆಮದು ನೀತಿಯ ಅಡಿಯಲ್ಲಿ ಚೈನಾ ದೇಶದ ರೇಷ್ಮೆ ಇವತ್ತು ನಮ್ಮ ದೇಶ ಹಾಗೂ ರಾಷ್ಟ್ರಕ್ಕೆ ಬರುತ್ತಿರುವ ಸಂದರ್ಭದಲ್ಲಿ, ಅದಲ್ಲದೆ ಕಳ್ಳತನದಲ್ಲಿ ನೇಪಾಳ ಹಾಗೂ ಬಾಂಗ್ಲಾ ದೇಶಗಳಿಂದ ಬರುತ್ತಿರುವ ವಿಷಯ ಕೂಡ ಚರ್ಚೆಯಾಗಿದೆ. ನಾನು ಕೂಡ ಕೋಲಾರದ ರೇಷ್ಮೆ ಬೆಳೆಗಾರರನ್ನು ಭೇಟಿ ಮಾಡಿ ಬಂದಿದ್ದೇನೆ. ನಾನೂ ಕೂಡ ರೇಷ್ಮೆ ಬೆಳೆಗಾರರ ಭಾಗದಿಂದ ಬಂದಿರುವ ವ್ಯಕ್ತಿ, ಇವತ್ತು ರೇಷ್ಮೆ ಉದ್ಯಮದಲ್ಲಿರುವವನು, ಆ ಉದ್ಯಮದಿಂದ ಬೇರೆ ಉದ್ಯಮದೆಡೆಗೆ ವರ್ಗಾವಣೆಯಾಗುವಂಥ ಸ್ಥಿತಿ ಇವತ್ತು ಉದ್ಭವಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಕೇಂದ್ರ ಸರ್ಕಾರದ ಆಮದು ನೀತಿ ಇದರಡಿಯಲ್ಲಿ ಕಳೆದ ಸಾರಿ ಮಾನ್ಯ ಶ್ರೀನಿವಾಸಗೌಡರು ಕೊಟ್ಟಂಥ ಅಂಕಿಅಂಶಗಳ ಪ್ರಕಾರ, ಹಿಂದೆ 2000 ಟನ್ ಬರುತ್ತಿದ್ದಂಥ ರೇಷ್ಮೆ ಈ ಸಾರಿ 6000 ಟನ್ ರೇಷ್ಮೆ ಇವತ್ತು ವಿದೇಶದಿಂದ ಆಮದಾಗುತ್ತಿದೆ. ಇದೂ ಕೂಡ ರೇಷ್ಮೆ ಬೆಲೆ ಕುಸಿತಕ್ಕೆ ಕಾರಣ. ಇದರ ಜೊತೆಗೆ ಕಳೆದ ಸಾರಿ ಚೈನಾ ರೇಷ್ಮೆಗೆ 24 ಡಾಲರ್ ಬೆಲೆ ಇದ್ದುದ್ದು ಪ್ರಸ್ತುತ ವರ್ಷ 13-14 ಡಾಲರ್‌ಗೆ ಇಳಿದಿರುವುದು ಮತ್ತೊಂದು ಅಂಶ. ಇದರ ಜೊತೆಗೆ ಒಜಿಎಲ್ ಆಧಾರದ ರೇಷ್ಮೆ ಆಮದಾಗುತ್ತಿದ್ದು, ರಫ್ತು ಮತ್ತು ಆಮದು ನಡುವಿನ ವ್ಯತ್ಯಾಸ ಕೂಡ ಇವತ್ತಿನ ಪರಿಸ್ಥಿತಿಗೆ ಕಾರಣವಾಗಿದೆ. ಈ ವಿಷಯ ಕುರಿತು ಕೇಂದ್ರ ಸಚಿವರೊಡನೆ

ಚರ್ಚೆ ಮಾಡಬೇಕು, ಅವರ ಗಮನ ಸೆಳೆಯಬೇಕು ಎನ್ನುವ ಸೂಚನೆಯ ಮೇರೆಗೆ ಈಗಾಗಲೇ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಎಸ್.ಎಂ. ಕೃಷ್ಣರವರು ಕೇಂದ್ರ ಸರ್ಕಾರದ ಸಚಿವರಿಗೆ ಒಂದು ಪತ್ರವನ್ನು ಕೂಡ ಬರೆದು ಈ ಅಂಶಗಳನ್ನು ಅವರ ಗಮನಕ್ಕೂ ತಂದಿದ್ದಾರೆ. ಮೊನ್ನೆ ಕೇಂದ್ರದಲ್ಲಿ ನಮ್ಮ ರಾಜ್ಯದಿಂದ ನೂತನವಾಗಿ ಜವಳಿ ಸಚಿವರಾಗಿ ಅಧಿಕಾರ ವಹಿಸಿಕೊಂಡ ಮಾನ್ಯ ಬಸವನಗೌಡ ಯತ್ನಾಳ್‌ರವರೂ ಕೂಡ ಕರ್ನಾಟಕ ರಾಜ್ಯಕ್ಕೆ ಬಂದಿದ್ದರು, ಅವರು ನಮ್ಮ ಹಾಗೂಮುಖ್ಯ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ. ಹಾಗೂ ಒಂದು ಭರವಸೆಯನ್ನೂ ಕೂಡ ಕೊಟ್ಟಿದ್ದಾರೆ. ಏನು ಈ ಅಮದು ಸುಂಕ 35 ಇದ್ದದ್ದು 30ಕ್ಕೆ ಇಳಿಸಿದರೋ ಅದನ್ನು ಹೆಚ್ಚಿಸುವ ಕೆಲಸವನ್ನೂ ಕೂಡ ನಾವು ಮಾಡುತ್ತೇವೆನ್ನುವ ಭರವಸೆಯನ್ನು ಕೂಡ ಕೊಟ್ಟಿದ್ದಾರೆ. ಹಿರಿಯ ನಾಯಕರಾದ ಮಾನ್ಯ ಸಿಂಧ್ಯಾರವರು ನಿನ್ನೆ ಒಂದು ಉತ್ತಮ ಸಲಹೆಯನ್ನು ಕೊಟ್ಟಿದ್ದಾರೆ. ಇವತ್ತು ಇಂತಹ ಪರಿಸ್ಥಿತಿ ಬರುವುದಕ್ಕೆ ಕಾರಣವಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರ ಕೂಡ ಬೆಂಬಲ ಬೆಲೆ ಕೊಡುವ ದಿಕ್ಕಿನಲ್ಲಿ ಚಿಂತನೆ ಮಾಡಬೇಕೆನ್ನುವ ಏನೊಂದು ಸಲಹೆಯನ್ನು ಕೊಟ್ಟಿದ್ದಾರೆ ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸರ್ವಪಕ್ಷ ಸದಸ್ಯರ ಜೊತೆಯಲ್ಲಿ ಚರ್ಚೆ ಮಾಡಿ ಆ ಬಗ್ಗೆ ಒಂದು ತೀರ್ಮಾನಕ್ಕೆ ಬರುವ ಒಂದು ಮುಕ್ತ ಮನಸ್ಸು ಸರ್ಕಾರಕ್ಕೆ ಇದೆ ಎಂಬುದನ್ನು ನಾನು ತಮ್ಮ ಮೂಲಕ ಸದನದ ಗಮನಕ್ಕೆ ತರಲಿಚ್ಚಿಸುತ್ತೇನೆ. ಈಗಾಗಲೇ ನಿಗದಿಯಾಗಿರುವಂತೆ 18ನೇ ತಾರೀಖು ಸರ್ವಪಕ್ಷದ ನಿಯೋಗ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಹೋಗಬೇಕೆನ್ನುವ ತೀರ್ಮಾನ ಕೂಡ ಆಗಿದೆ. ನಾನು ಮಾನ್ಯ ವಿರೋಧಪಕ್ಷದ ಮತ್ತು ವಿವಿಧ ಪಕ್ಷದ ನಾಯಕರಲ್ಲಿ ರೇಷ್ಮೆ ಬೆಳಿಗಾರರ ಪರವಾಗಿ ವಿನಂತಿ ಮಾಡುತ್ತೇನೆ, ತಾವುಗಳು ತಮ್ಮ ಹೆಸರುಗಳನ್ನು ಕೊಟ್ಟು ನಮ್ಮೊಡನೆ ಮುಕ್ತವಾಗಿ ಮಾತನಾಡಿ, ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದಕ್ಕೆ ಒಟ್ಟಿಗೆ ಹೋಗೋಣ ಎಂದು ಈ ಸದನದಲ್ಲಿ ತಿಳಿಸುತ್ತೇನೆ. ನಿನ್ನೆ ಒಂದು ವಿಷಯದ ಬಗ್ಗೆ ಚರ್ಚೆಯಾಯಿತು, ಹಿಂದಿನ ಕೇಂದ್ರ ಜವಳಿ ಖಾತೆ ಸಚಿವರು 200 ಕೋಟಿ ರೂಪಾಯಿಗಳ ಆವರ್ತ ನಿಧಿಯನ್ನು ಕೊಡುತ್ತಾ ಎನ್ನುವ ಸುದ್ದಿ ಏನು ಇತ್ತೋ ಆ ಬಗ್ಗೆ ನಿನ್ನೆ ತಾನೇ ಕೇಂದ್ರ ರೇಷ್ಮೆ ಮಂಡಳಿಯಿಂದ ಕಾಗದ ಬಂದಿದ್ದು, ಅವರು 200 ಕೋಟಿ ರೂಪಾಯಿಗಳನ್ನು ಕೊಡಲು ಮುಂದೆ ಬಂದಿಲ್ಲ. ಅವರು ನಮ್ಮ ಕರ್ನಾಟಕ ಸರ್ಕಾರದ ಮೇಲೆ ಒತ್ತಡವನ್ನು ಹೇರುತ್ತಿದ್ದಾರೆ. ನಮ್ಮ ರಾಜ್ಯ ಸರ್ಕಾರ ಅವರಿಗೆ ಗ್ಯಾರಂಟಿ ಕೊಡುವುದಾದರೆ ಸಾಫ್ಟ್ ಲೋನ್‌ಗೆ ಸಹಾಯ ಮಾಡುತ್ತೇವೆಯೇ ಹೊರತು ನಾವು 200 ಕೋಟಿ ರೂಪಾಯಿಗಳನ್ನು ಕೊಡುವ ಸ್ಥಿತಿಯಲ್ಲಿಲ್ಲವೆನ್ನುವ ವಿಷಯವನ್ನು ಪತ್ರದ ಮುಖೇನ ಅವರು ತಿಳಿಸಿದ್ದಾರೆ. ಈ ಅಂಶಗಳನ್ನೆಲ್ಲಾ ನಾವು ಗಮನದಲಿಟ್ಟು ಕೊಂಡು ಇವತ್ತು ಕರ್ನಾಟಕ ರಾಜ್ಯದಲ್ಲಿ ಮೈಸೂರು ರೇಷ್ಮೆಯ ಹಿರಿಮೆ ಎನಿದೆ ಅದನ್ನು ಉಳಿಸಿಕೊಳ್ಳಲು ನಾವೆಲ್ಲರೂ ಕೂಡ ಪ್ರಯತ್ನ ಮಾಡುತ್ತೇವೆ ಅಲ್ಲದೆ ವಿರೋಧಪಕ್ಷದವರ ಸಹಕಾರ ಪಡೆದುಕೊಂಡು ಕೇಂದ್ರ ಸರ್ಕಾರ ಮೇಲೆ ಒತ್ತಡವನ್ನು ತರೋಣ ನಮ್ಮ ಭಾಗದ ಕೆಲಸವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳೊಡನೆ ಚರ್ಚೆ ಮಾಡಿ ಮಾಡಲು ಪ್ರಯತ್ನ ಮಾಡುತ್ತೇವೆ. ಏಕೆಂದರೆ, ಈಗಾಗಲೇ ಕರ್ನಾಟಕ ರಾಜ್ಯದ ರೈತರ ಬಗ್ಗೆ ಕಾಳಜಿ ಮಹಿಸಿ ನಮ್ಮ ಸರ್ಕಾರ ರಾಗಿಗೆ, ಕೊಬ್ಬರಿಗೆ ಸೇರಿದಂತೆ ಮೆಕ್ಕೆಜೋಳಕ್ಕೂ ಕೂಡ ಬೆಂಬಲ ಬೆಲೆಯನ್ನು ಕೊಟ್ಟಿರುವುದನ್ನು ನಮ್ಮ ರೈತರು ಇವತ್ತು ಸ್ವಾಗತವನ್ನು ಮಾಡಿರುತ್ತಾರೆ. ಹಾಗೆಯೇ ಆಲೂಗಡ್ಡೆಗೂ ಕೂಡ ಬೆಂಬಲ ಬೆಲೆ ಕೊಟ್ಟಿರುವುದನ್ನು ಕರ್ನಾಟಕ

ರೈತರು ಸ್ವಾಗತ ಮಾಡಿದ್ದಾರೆ. ಈ ಪರಿಸ್ಥಿತಿಯಲ್ಲಿ, ಕರ್ನಾಟಕ ರೇಷ್ಮೆ ಉದ್ದಿಮೆಗಳಲ್ಲಿ ತೊಡಗಿರತಕ್ಕಂಥ ರೇಷ್ಮೆ ಬೆಳೆಗಾರರು, ರೀಲರ್ಸ್ ಟ್ವಿಸ್ಟರ್ಸ್ ಮತ್ತು ಉದ್ದಿಮೆಯಲ್ಲಿರುವ ಇತರ ಎಲ್ಲರ ಏಳಿಗೆಯನ್ನು ಗಮನದಲ್ಲಿಟ್ಟುಕೊಂಡು ಈ ವಿಷಯದಲ್ಲಿ ನಾವು ಕಾರ್ಯೋನ್ಮುಖರಾಗುತ್ತೇವೆ. ಈ ಬೆಳೆಯನ್ನು ಉಳಿಸಿಕೊಳ್ಳುವುದಕ್ಕೆ, ಮತ್ತು ಕರ್ನಾಟಕದ ಹಿರಿಮೆಯನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರ ಸರ್ವ ಪ್ರಯತ್ನವನ್ನು ಮಾಡುತ್ತದೆ ಎನ್ನುವ ವಿಷಯವನ್ನು ನಾನು ತಮ್ಮ ಮೂಲಕ ಎಲ್ಲಾ ಮಾನ್ಯ ಸದಸ್ಯರುಗಳಿಗೆ ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಭೈರೇಗೌಡ:- ರೇಷ್ಮೆ ಬೆಳೆಗಾರರು ಬಹಳ ನಿರೀಕ್ಷೆಯನ್ನು ಇಟ್ಟುಕೊಂಡಿದ್ದರು. ನಾವೆಲ್ಲಾ ಸಹಕಾರ ಕೊಡಬೇಕೆಂದು ಹೇಳಿದರು. ನಾವು ಸಹಕಾರ ಕೂಡದೇ ನಿಮಗೆ ಇನ್ನೇನು ಮಾಡಿದ್ದೇವೆ? ಹೇಳಿ.

ಶ್ರೀ ಹೆಚ್.ಎಂ. ರೇವಣ್ಣ:- ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು ನಿಮ್ಮ ಸಹಕಾರ ಬೇಕು ಎಂದು ನಾವು ಹೇಳಿದ್ದೇವೆ.

ಅಧ್ಯಕ್ಷರು:- ಅವರು ಈಗತಾನೇ ಚಾರ್ಜ್ ತೆಗೆದುಕೊಂಡಿದ್ದಾರೆ. ಅವರಿಗೆ ಸ್ವಲ್ಪ ಸಮಯ ಕೊಡಿ.

ಶ್ರೀ ಹೆಚ್.ಎಂ. ರೇವಣ್ಣ:- ನಾನು ಅವರ ಸಲಹೆಯನ್ನೂ ತೆಗೆದುಕೊಂಡಿದ್ದೇನೆ. ಮಾನ್ಯ ಸಿಂಧ್ಯಾರವರು ಕೊಟ್ಟಂಥ ಸಲಹೆಯನ್ನೂ ತೆಗೆದುಕೊಂಡಿದ್ದೇನೆ. ಈ ವಿಚಾರದಲ್ಲಿ ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು. ನಾವು ಬೆಂಬಲ ಬೆಲೆ ಕೊಡುವ ವಿಷಯದಲ್ಲಿ ಅವರು ಕೊಟ್ಟಿರುವ ಸಲಹೆಯನ್ನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚಿಸಿ ಕ್ರಮ ತೆಗೆದುಕೊಳ್ಳಲು ನಾವು ಪ್ರಯತ್ನ ಮಾಡುತ್ತೇವೆ ಎಂದು ನಾವು ಹೇಳಿದ್ದೇವೆ.

ಶ್ರೀ ಸಿ. ಭೈರೇಗೌಡ:- ಈ ವಿಚಾರ ಮತ್ತು ಪ್ರಸ್ತಾಪ ಆಗಿರತಕ್ಕಂಥಾದ್ದು ಅಲ್ಲ. ಕಳೆದ ಆರೇಳು ತಿಂಗಳಿಂದ ರಾಜ್ಯದಲ್ಲಿದ್ದಂಥ ರೇಷ್ಮೆ ಗೂಡಿನ ಬೆಲೆ 150-170 ರೂಪಾಯಿಗಳು ಇದ್ದದ್ದು 40-50 ರೂಪಾಯಿಗಳಿಗೆ ಯಾವಾಗ ಇಳಿಯಿತೋ ಆಗಿನಿಂದಲೂ ರಾಜ್ಯದ ಎಲ್ಲಾ ಕಡೆಯ ರೈತರೂ ಬೀದಿಗಳಿದು ಹೋರಾಟ ಮಾಡಿದ್ದಾರೆ. ಬರವಣಿಗೆಯಲ್ಲಿ ಮನವಿ ಸಲ್ಲಿಸಿದ್ದಾರೆ. ಬಂದ್, ರಸ್ತೆ ತಡೆಗಳಂಥ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಅನೇಕ ಸಂದರ್ಭಗಳಲ್ಲಿ ಸಂಬಂಧಿಸಿದ ಮಂತ್ರಿಗಳನ್ನು ಮತ್ತು ಮುಖ್ಯಮಂತ್ರಿಗಳನ್ನು ಭೇಟಿಯಾಗಿದ್ದಾರೆ. ಅನೇಕ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಅವರನ್ನು ಕರೆದು ಮಾತನಾಡಿರುವುದೂ ಉಂಟು. ಇಷ್ಟೆಲ್ಲಾ ಆಗಿದ್ದರೂ, ಇನ್ನೂ ನಾವು ಮುಖ್ಯಮಂತ್ರಿಗಳು ಹತ್ತಿರ ಮಾತನಾಡುತ್ತೇವೆ ಎಂದು ಹೇಳಿದರೆ, ಈ ರೀತಿಯ ಉತ್ತರವನ್ನು ಕೇಳಿಕೊಂಡು ನಾವು ಹೇಗೆ ಸುಮ್ಮನೆ ಕುಳಿತಿರಬೇಕು? ಅವರಿಗೆ ಸಮಯಾವಕಾಶ ಕೊಡಿ ಎಂದು ತಾವು ಹೇಳುತ್ತಿದ್ದೀರಿ. ದಯವಿಟ್ಟು ಈ ವಿಚಾರದಲ್ಲಿ ತಾವು ಯಾರಿಗೂ ರಕ್ಷಣೆ ಕೊಡಬೇಡಿ. ಸರ್ಕಾರಕ್ಕಂತೂ ತಾವು ಲವಲೇಶವೂ ರಕ್ಷಣೆ ಕೊಡಲು ಹೋಗಬೇಡಿ. ಏಕೆಂದರೆ, ತೆಂಗಿಗೆ ನುಸಿರೋಗ ಬಂತು. ಹೊಟ್ಟೆಯಲ್ಲಿ ಬೆಂಕಿ ಬೀಳುವಂಥ ಫೋಟೋಗಳನ್ನು ಪತ್ರಿಕೆಗಳು ಪ್ರಕಟಿಸುತ್ತಿವೆ. ಇಲ್ಲಿ ನಡೆದಿರತಕ್ಕಂಥ ಅವ್ಯವಹಾರಗಳ ಬಗ್ಗೆ ಚರ್ಚೆಯಾಗಲೇ ಬೇಕು. ಇತವತ್ತಿನ ದಿವಸ ತೆಂಗಿನ ಮರಗಳನ್ನು ಕಡಿಯುತ್ತಿದ್ದಾರೆ. ಪ್ರೀತಿಯಿಂದ ಬೆಳೆಸಿದಂಥ ಮರಗಳನ್ನು ರೈತ ತನ್ನ

ಕೈಯಾರೆ ಕಡಿಯತಕ್ಕಂಥ ಪರಿಸ್ಥಿತಿ ರಾಜ್ಯದಲ್ಲಿ ಉಂಟಾಗಿದೆ. ಅದರ ಜೊತೆಗೆ, ಇವತ್ತಿನ ದಿವಸ ಹಿಪ್ಪುನೇರಳೆಯನ್ನು ಸಹ ಕೀಳುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ನೂರಾರು ಎಕರೆ ಪ್ರದೇಶದಲ್ಲಿ ಬೆಳೆದಿರತಕ್ಕಂಥ ಹಿಪ್ಪುನೇರಳೆಯನ್ನು ಕೀಳತಕ್ಕಂಥಾದ್ದು ನಡೆಯುತ್ತಿದೆ. ಹಿಪ್ಪುನೇರಳೆ ತೋಟ ಬೆಳೆಸಲು ಕನಿಷ್ಟ ಎರಡು ವರ್ಷವಾದರೂ ಬೇಕು. ಅದನ್ನು ಒಂದು ಸಾರಿ ತೆಗೆದರು ಎಂದರೆ ರೈತರ ಕತೆ ಮುಗಿಯಿತು ಎಂದೇ ಅರ್ಥ. ಇವತ್ತಿನ ದಿವಸ ಅದೂ ನಡೆಯುತ್ತಿದೆ. ಹೀಗೆ ಕೀಳುತ್ತಿರತಕ್ಕಂಥಾದ್ದನ್ನು ತಡೆಗಟ್ಟಲು ದೆಹಲಿಯ ವರ ಸಹಕಾರ ಬೇಕು ಎಂದು ನೀವು ಅವರ ಕಡೆ ಕೈ ತೋರಿಸಿದರೆ, ಜನ ನಿಮಗೆ ಇನ್ನೊಂದು ಕಡೆ ಕೈ ತೋರಿಸುತ್ತಾರೆ. ದಯವಿಟ್ಟು ಇದನ್ನು ಜ್ಞಾಪಕದಲ್ಲಿಟ್ಟುಕೊಂಡು ಮಾತನಾಡಿ. ಇದು ನಿನ್ನೆ ಮೊನ್ನೆಯ ಸಮಸ್ಯೆಯಾಗಿದ್ದರೆ, ನೀವು ಹೇಳುವುದನ್ನು ನಾನು ಒಪ್ಪುತ್ತಿದೆ. ಸುಮಾರು ಒಂದು ವರ್ಷದಿಂದ ಬೆಳೆದು ಬಂದಿರತ್ತಂಥ ಸಮಸ್ಯೆ ಇದು. ಆದರೆ ಇವತ್ತು ನೀವು, ಬೆಂಬಲ ಕೊಡಲು ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡುತ್ತೇನೆ ಎಂದು ಹೇಳುವ ಮಾತನ್ನು ನಾವು ಇಲ್ಲಿ ಸುಮ್ಮನೆ ಕುಳಿತು ಕೇಳಿದರೆ ಹೇಗೆ? ನಾನು ಒಬ್ಬ ರೇಷ್ಮೆ ಬೆಳಿಗಾರ. ನನ್ನ ಕತೆ ಹೇಳಿದರೆ ಕಣ್ಣಿನ ನೀರು ಬರುತ್ತದೆ. ಏನು ಪರಿಸ್ಥಿತಿಯಾಗಿದೆ ಎನ್ನುವ ಬಗ್ಗೆ ವಿವರಣೆ ಕೊಟ್ಟರೆ ನಿಜವಾಗಿಯೂ ನನ್ನ ಮೈ ಎಲ್ಲಾ ಬೆಂದು ಹೋಗುತ್ತದೆ. ಯಾವ ಪಾಪ ಮಾಡಿ ನಾವು ರೈತರಾಗಿ ಈ ದೇಶದಲ್ಲಿ ಹುಟ್ಟಿದ್ದೇವೆ ಎಂದು ಹೇಳುವಷ್ಟು ಸಿಟ್ಟು ಬರುತ್ತದೆ. ಮೈ ಎಲ್ಲಾ ಬೆಂದು ಹೋಗುತ್ತದೆ. ಇವತ್ತಿನ ದಿವಸ ಆ ಪರಿಸ್ಥಿತಿ ಇದೆ. ಇದು ಕೇವಲ ನನ್ನ ಪರಿಸ್ಥಿತಿಯಲ್ಲ. ನನ್ನಂಥ ಲಕ್ಷಾಂತರ ಮಂದಿ ರೈತರ ಪರಿಸ್ಥಿತಿಯೂ ಇದೇ ಆಗಿದೆ. ಅದರಲ್ಲೂ ಮುಖ್ಯವಾಗಿ ರೇಷ್ಮೆ ಬೆಳಿಗಾರರ ಪರಿಸ್ಥಿತಿ ಈ ರೀತಿ ಇದೆ. ಆದರೆ, ಚರ್ಚೆ ಮಾಡುತ್ತೇವೆ ಎನ್ನುವ ಉತ್ತರ ಸರ್ಕಾರದಿಂದ ಬರುತ್ತಿದೆ. ಯಾವಾಗ ಸ್ವಾಮಿ ನೀವು ಚರ್ಚೆ ಮಾಡುವುದು? ಚರ್ಚೆ ಮಾಡಲು ಎಷ್ಟು ದಿವಸ ಬೇಕು? ನಿಮ್ಮದೆಲ್ಲಾ ಎಲೆಕ್ಟ್ರಾನಿಕ್ ಗವರ್ನೆನ್ಸ್. ಎಲ್ಲಿದೆ ನಿಮ್ಮ ಇ-ಗವರ್ನೆನ್ಸ್? ಚರ್ಚೆ ಮಾಡುತ್ತೇನೆ ಎಂದು ಹೇಳುತ್ತೀರಲ್ಲಾ. ಏನು ಚರ್ಚೆ ಮಾಡಬೇಕಾಗಿದೆ ಇದರಲ್ಲಿ? ಕೇಂದ್ರ ಸರ್ಕಾರದವರ ಕಡೆ ಕೈತೋರಿಸಿ ನೀವು ಸುಮ್ಮನೆ ಕುಳಿತುಕೊಳ್ಳಲು ಆಗುವುದಿಲ್ಲ. ಒಂದು ಕೆ.ಜಿ. ರೇಷ್ಮೆ ಗೂಡಿಗೆ 150 ರೂಪಾಯಿಗಳ ಬೆಲೆ ನಿಗದಿ ಮಾಡುತ್ತೇವೆ. ಅದಕ್ಕಿಂತ ಕಡಿಮೆ ಬೆಲೆಗೆ ಹೋದರೆ ಸರ್ಕಾರ ಕೊಂಡು ಕೊಳ್ಳುತ್ತದೆ ಎಂದು ಹೇಳಿ. ನಿಮ್ಮ ಸಿಲ್ಕ್ ಫಿಲೇಚರ್ಸ್‌ಗಳಿವೆ. ಅವು ಏನು ಕೆಲಸ ಮಾಡುತ್ತಿವೆ? ರೇಷ್ಮೆ ಗೂಡನ್ನು ಕೊಂಡುಕೊಳ್ಳುವುದು, ನೂಲು ಬಿಚ್ಚುವಂಥ ವ್ಯವಹಾರವನ್ನು ಅಲ್ಲಿಂದ ನಡೆಸಿ ಗೂಡನ್ನು ಕೊಂಡುಕೊಳ್ಳಿ ಇದಕ್ಕೆ ಯಾರ ಹತ್ತಿರ ಕೂಡ ಚರ್ಚೆ ಮಾಡಬೇಕಾಗಿಲ್ಲ.

ಅಧ್ಯಕ್ಷರು:- ಹಿರಿಯ ಸದಸ್ಯರಾದ ಅವರೇ ಹೀಗೆ ಭಾಷಣ ಮಾಡಿದರೆ ಹೇಳುವವರು ಯಾರು? ಅವರೇ ಅರ್ಥ ಮಾಡಿಕೊಳ್ಳಬೇಕು. ಕ್ಲಾರಿಫಿಕೇಷನ್ ಕೇಳಿ ಎಂದರೆ ಭಾಷಣ ಮಾಡುತ್ತಾರೆ.

ಶ್ರೀ ಸಿ. ಭೈರೇಗೌಡ:- ಮಾನ್ಯ ಅಧ್ಯಕ್ಷರೆ, ಸಿಲ್ಕ್ ಫಿಲೇಚರ್ಸ್ ಇವರ ಇಲಾಖೆಯ ಕೈಕೆಳಗೆ ಇರತಕ್ಕಂಥಾದ್ದು. ಅವರು ಕೊಂಡುಕೊಳ್ಳಲಿ. ಕೊಂಡುಕೊಳ್ಳುವಂಥ ವ್ಯವಸ್ಥೆ ಮಾಡಲಿ.

ಅಧ್ಯಕ್ಷರು:- ಅದು ಕ್ಯಾಬಿನೆಟ್ ಮುಂದೆ ಹೋಗಬೇಕು. ಕ್ಯಾಬಿನೆಟ್‌ಗೆ ಹೋಗದೇ ಅವರು ಒಪ್ಪಿಕೊಳ್ಳಲು ಆಗುತ್ತದೆಯೇ ಫೈನಾನ್ಷಿಯಲ್ ಮ್ಯಾಟರ್ಸ್‌ಗೆ ಕ್ಯಾಬಿನೆಟ್ ಮುಂದೆ ಹೋಗಲೇಬೇಕು.

ಶ್ರೀ ಸಿ. ಭೈರೇಗೌಡ:- ಕ್ಯಾಬಿನೆಟ್‌ಗೆ ಹೋಗಬೇಕಾಗಿಲ್ಲ. ಸರ್ಕಾರ ನಡೆಸಿರುವ ಅನುಭವ ನಮಗೂ ಇದೆ. ಇದು ಅವರ ಇಲಾಖೆಗೇ ಸಂಬಂಧಪಟ್ಟಿರತಕ್ಕಂಥಾದ್ದು. ಅವರ ಇಲಾಖೆಯ ಅಧೀನ ಸಮಸ್ಯೆಗಳಾಗಿರತಕ್ಕಂಥವು ಇವು. ಮಾನ್ಯ ಮಂತ್ರಿಗಳ ಕೈಕೆಳಗೆ ನೇರವಾಗಿ ಇರತಕ್ಕಂಥ ಸಮಸ್ಯೆಗಳು. ಅವರು ಬಂದು ಮಾರುಕಟ್ಟೆಯಲ್ಲಿ ಕುಳಿತುಕೊಳ್ಳಲಿ. ಆಗ ಮಾರುಕಟ್ಟೆಯಲ್ಲಿ ಗೂಡಿನ ಬೆಲೆ ತನ್ನಷ್ಟಕ್ಕೆ ತಾನೇ ಏರುತ್ತದೆ. ಇವತ್ತು ಅವರು ಈ ಕೆಲಸವನ್ನು ಮಾಡುತ್ತಿಲ್ಲ. ಆದ್ದರಿಂದ ಇವತ್ತು ರೈತರು ಕಣ್ಣೀರಿನ ಬದಲಾಗಿ ರಕ್ತ ಸುರಿಸುತ್ತಿದ್ದಾರೆ.

ಅಧ್ಯಕ್ಷರು:- ಅವರು ಅಷ್ಟು ಸುಲಭವಾಗಿ ಅನೌನ್ಸ್ ಮಾಡಲು ಆಗುವುದಿಲ್ಲ. ಅದು ಕ್ಯಾಬಿನೆಟ್‌ಗೆ ಹೋಗಬಾರದೇ? ಕ್ಯಾಬಿನೆಟ್‌ಗೆ ಹೋಗದೇ ಅನೌನ್ಸ್ ಮಾಡಬಹುದೇ?

ಶ್ರೀ ಸಿ. ಭೈರೇಗೌಡ:- ತಾವು ಏಕೆ ಈ ವಿಚಾರದಲ್ಲಿ ಅವರಿಗೆ ರಕ್ಷಣೆ ಕೊಡುತ್ತೀರಿ ಎನ್ನುವುದು ನನಗಂತೂ ಗೊತ್ತಾಗುತ್ತಿಲ್ಲ. ಅವರ ಫಿಲೇಚರ್ಸ್‌ನವರು ಮಾರುಕಟ್ಟೆಗೆ ಹೋಗಲಿ, ಕೊಂಡುಕೊಳ್ಳತಕ್ಕಂಥ ಪ್ರಯತ್ನ ಮಾಡಲಿ.

ಅಧ್ಯಕ್ಷರು:- ಅದನ್ನು ಹೇಳಿ, ಮಾರುಕಟ್ಟೆಗೆ ಹೋಗಿ ನೋಡಿ ಎಂದು ಹೇಳಿ. ಅನೌನ್ಸ್ ಮಾಡಿ ಎಂದರೆ ಅವರು ಹೇಗೆ ಅನೌನ್ಸ್ ಮಾಡುತ್ತಾರೆ?

ಶ್ರೀ ಸಿ. ಭೈರೇಗೌಡ:- ಅದಕ್ಕೆ ಏಕೆ ಕ್ಯಾಬಿನೆಟ್ ಬೇಕು ಸ್ವಾಮಿ? ಅವರು ಇರತಕ್ಕಂಥಾದ್ದೇ ಆ ಕೆಲಸ ಮಾಡಲು ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಇದೆ. ಅದು ಏನು ಮಾಡುತ್ತಿದೆ? ಮಲಗಿಕೊಂಡು ನಿದ್ರೆ ಮಾಡುತ್ತಿದೆಯೇ? ರೈತರ ನೆರವಿಗೆ ಬರದೇ ಇರತಕ್ಕಂಥ ಇಂಥ ಸಂಸ್ಥೆಗಳು ಏತಕ್ಕಾಗಿ ಇರಬೇಕು? ಅದರ ಅವಶ್ಯಕತೆಯಾದರೂ ಏನಿದೆ? ಅವುಗಳೆಲ್ಲಾ ಮಾನ್ಯ ಮಂತ್ರಿಗಳ ಕೈಕೆಳಗೆ ಇರತಕ್ಕಂಥವು. ಅವಗಳೆಲ್ಲವೂ ಆ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳು. ಮಾರುಕಟ್ಟೆಗೆ ಹೋಗಿ, ಗೂಡನ್ನು ಹರಾಜಿನಲ್ಲಿ ಕೂಗಿ ಎನ್ನುವ ನಿರ್ದೇಶನವನ್ನು ಕೊಡಲಿ. ಇದನ್ನು ಕ್ಯಾಬಿನೆಟ್‌ನಲ್ಲಿ ಕೇಳಬೇಕೇ? ಅವರು ಹೇಳತಕ್ಕಂಥಾದ್ದರಲ್ಲಿ ಅರ್ಥವಿಲ್ಲ.

ಅಧ್ಯಕ್ಷರು:- 150 ರೂಪಾಯಿಗಳವರೆಗೂ ಬೆಂಬಲ ಬೆಲೆ ಕೊಡಬೇಕು ಎಂದು ಹೇಳಿದಿರಲ್ಲಾ, ಅದು ಕ್ಯಾಬಿನೆಟ್‌ಗೆ ಹೋಗುವುದು ಬೇಡವೇ? ಏನು ಹೀಗೆ ಹೇಳುತ್ತೀರಿ ನೀವು?

ಶ್ರೀ ಸಿ. ಭೈರೇಗೌಡ:- ಇವರು ಮಾರುಕಟ್ಟೆಗೆ ಹೋದರೆ ಬೆಲೆ ತನ್ನ ಪಾಡಿಗೆ ತಾನೇ ಬೆಲೆ ಏರುತ್ತದೆ. ಅದಕ್ಕೆ ಯಾವ ಕ್ಯಾಬಿನೆಟ್‌ಗೆ ಹೋಗಬೇಕಾಗಿದೆ?

ಅಧ್ಯಕ್ಷರು:- ನಿಮ್ಮಂಥ ಹಿರಿಯ ಸದಸ್ಯರೇ ಈ ರೀತಿ ಮಾತನಾಡಿದರೆ ನಾನು ಏನು ಹೇಳಲಿ?

ಶ್ರೀ ಹೆಚ್.ಎಂ. ರೇವಣ್ಣ:- ಮಾನ್ಯ ಅಧ್ಯಕ್ಷರೇ, ಮಾನ್ಯ ಭೈರೇಗೌಡರ ಕಾಳಜಿ, ಕಳಕಳಿಯನ್ನು ನಾವು ಒಪ್ಪೋಣ. ಸರ್ಕಾರ ಅದರ ಬಗ್ಗೆ ತೀವ್ರ ಪರಿಶೀಲನೆ ಮಾಡಿದೆ, ನುರಿತನ್ನೊಳಗೊಂಡ ತಜ್ಞರ ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಿದೆ

ಶ್ರೀ ಪಿ.ಜಿ.ಆರ್ ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಮಾನ್ಯ ಭೈರೇಗೌಡರ ತೀವ್ರತರವಾದ ಆತಂಕ ಏಕೆಂದರೆ, ಕಳೆದ ಒಂದು ತಿಂಗಳಿಂದ ಕೆ.ಎಸ್.ಐ.ಸಿ-ಯ ಐದು ಫಿಲೇಚರ್ ಯೂನಿಟ್‌ಗಳು ಕೆಲಸ ಮಾಡುತ್ತಿಲ್ಲ. ಇದು ತಮಗೂ ಗೊತ್ತಿದೆ. ಇಲ್ಲಿ ನಿಜಾಂಶವನ್ನು ಮಾತನಾಡೋಣ. ನಿನ್ನೆ ಅದರ ಕಾರ್ಮಿಕರು ಟಿ. ನರಸೀಪುರದಿಂದ, ಚೆನ್ನಪಟ್ಟಣದಿಂದ, ಕನಕಪುರದಿಂದ ಬಂದಿದ್ದರು. ಸರ್ಕಾರದವರು ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡಿ ಎಷ್ಟು ಸಾಧ್ಯವೋ ಅಷ್ಟು ಗೂಡುಗಳನ್ನು ಪರ್ಚೇಸ್ ಮಾಡಿದರೆ ಕೆ.ಎಸ್.ಐ.ಸಿ ಯೂನಿಟ್‌ಗಳು ಕೆಲಸ ಮಾಡುತ್ತೇವೆ. ಆಗ ಒಂದು ಕೆ.ಜಿ. ಗೂಡಿಗೆ ಒಂದು ಹತ್ತು ರೂಪಾಯಿಗಳು ಜಾಸ್ತಿಯಾಗಬಹುದು. ಇದು ಮೊದಲನೆಯದು. ಮತ್ತೊಂದು ವಿಷಯವೆಂದರೆ, ಜವಳಿ ಮಂತ್ರಿಗಳಾಗಿದ್ದ ಮಾನ್ಯ ಧನಂಜಯಕುಮಾರ್‌ರವರು 15 ದಿವಸಗಳ ಕೆಳಗೆ ಇಲ್ಲಿಗೆ ಬಂದಿದ್ದಂಥ ಸಂದರ್ಭದಲ್ಲಿ. ಸೆಂಟ್ರಲ್ ಸಿಲ್ಕ್ ಬೋರ್ಡ್ ಬೇಸ್ ಕರ್ನಾಟಕವಾಗಿರುವುದರಿಂದ, ನಾವು ಇಂಟರ್‌ವೆನ್‌ಷನ್ ಮಾಡುತ್ತೇವೆ. ಒಂದಷ್ಟು ಹಣ ಕೊಡಲು ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಈ ಮಧ್ಯೆ, ತಾವು 18 ಅಥವಾ 19ನೇ ತಾರೀಖಿನಂದು ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ಒಂದು ನಿಯೋಗವನ್ನು ತೆಗೆದುಕೊಂಡು ಹೋಗುತ್ತೇವೆ ಎನ್ನುವ ಮಾತನ್ನು ಹೇಳುತ್ತಿದೀರಿ. ನಿನ್ನೆಯ ದಿವಸ ನಾನು, ಮಾನ್ಯ ಭೈರೇಗೌಡರು, ಮಾನ್ಯ ಶ್ರೀನಿವಾಸಗೌಡರ ಮತ್ತು ಇನ್ನೂ ಅನೇಕ ಮಾನ್ಯ ಸದಸ್ಯರುಗಳು ರೇಷ್ಮೆ ಬೆಳೆಗಾರರ ಪರವಾಗಿ ಒತ್ತಾಯ ಮಾಡಿದ್ದು ಏನೆಂದರೆ, ದಯವಿಟ್ಟು ಕೆಎಸ್.ಐ.ಸಿ ಯೂನಿಟ್‌ಗಳನ್ನು ಮುಚ್ಚಲು ಹೋಗಬೇಡಿ. ಬೆಲೆಗಳನ್ನು ಏರಿಸಲು ಮತ್ತು ಬೆಳೆಯತಕ್ಕಂಥ ರೈತರಿಗೆ ಅನುಕೂಲ ಮಾಡಿಕೊಡಲು ನಿಮಗೆ ಅದು ಒಂದು ಅಸ್ತ್ರವಾಗಿದೆ. ಇದರಿಂದ ರೀಲರ್ಸ್‌ಗೂ ಸ್ವಲ್ಪಮಟ್ಟಿಗೆ ಸಹಾಯವಾಗುತ್ತದೆ. ಎರಡನೆಯದಾಗಿ, ಇಲ್ಲಿ ನೀವು ಏನೇ ಹೇಳಿಕೆ ಕೊಟ್ಟರೂ ಅದು ಮಾನ್ಯ ರೇವಣ್ಣನವರ ಹೇಳಿಕೆಯಾಗುವುದಿಲ್ಲ. ಕರ್ನಾಟಕ ಸರ್ಕಾರದ ರೇಷ್ಮೆ ಸಚಿವರ ಹೇಳಿಕೆಯಾಗುತ್ತದೆ. ಇದರಿಂದ ಬೇಕಾದಷ್ಟು ಪರಿಣಾಮಗಳಾಗುತ್ತವೆ. ಪಾಸಿಟಿವ್ ಡೆವಲಪ್‌ಮೆಂಟ್‌ಗಳಾಗುತ್ತವೆ. ಕೊಳ್ಳತಕ್ಕಂಥವರು ಸ್ವಲ್ಪ ಹೆಚ್ಚಿನ ಬೆಲೆಗೆ ಮಾರುಕಟ್ಟೆಯಲ್ಲಿ ಕೊಂಡುಕೊಳ್ಳುತ್ತಾರೆ. ಆದ್ದರಿಂದ, ನಾವು ಬೆಂಬಲ ಬೆಲೆಯನ್ನು ಕೊಡುತ್ತೇವೆ ಎನ್ನುವ ಭರವಸೆಯನ್ನಾದರೂ ಈ ಸಂದರ್ಭದಲ್ಲಿ ಕೊಡಬೇಕು. ಈಗಾಗಲೇ ಈ ಚರ್ಚೆ ಪ್ರಾರಂಭವಾಗಿ ಮೂರು ದಿನಗಳಾಗಿವೆ. ಕ್ಯಾಬಿನೆಟ್‌ಗೆ ಹೋಗಬೇಕಾಗುತ್ತದೆ ಎಂದು ಹೇಳಿದಿರಿ. ಇವೆಲ್ಲಾ ಆಗಬೇಕಾದಂಥ ಕ್ರಮಗಳು ಆದರೆ ಈಗ ಬರಗಾಲ ಪರಿಸ್ಥಿತಿ ಇದೆ. 90 ಲಕ್ಷ ಜನ ಈ ರೇಷ್ಮೆ ವ್ಯವಸಾಯವನ್ನು ಅವಲಂಬಿಸಿಕೊಂಡಿರತಕ್ಕಂಥವರು 12 ಜಿಲ್ಲೆಗಳಲ್ಲಿ ಇದ್ದಾರೆ. ಉತ್ತರ ಕರ್ನಾಟಕದಲ್ಲಿ ಇದ್ದಾರೆ. ಈ ದೃಷ್ಟಿಯಿಂದಾಗಿ ತಾವು ನಿರ್ದಿಷ್ಟವಾಗಿ ಕೊನೆಯ ಪಕ್ಷ ನಾವು 18ನೇ ತಾರೀಖಿಗೆ ಹೋಗುವುದಕ್ಕೆ ಮುಂಚೆ, ಈಗ ಮಾನ್ಯ ಕೃಷಿ ಸಚಿವರು - 15ನೇ ತಾರೀಖಿನ ಒಳಗಡೆ 58 ಕೋಟಿ ರೂಪಾಯಿಗಳ ಬಾಕಿ ಏನು ಇದೆ ಅದನ್ನು ಬಿಡುಗಡೆ ಮಾಡುತ್ತೇವೆನ್ನುವ ಮಾತನ್ನು ಶ್ರೀ ಜಗದೀಶ್ ಶೆಟ್ಟರ್ ಅವರಿಗೆ ಹೇಳಿದರು ನೀವು ಬಿಡುಗಡೆ ಮಾಡಿಲ್ಲ ಎಂದು ಹೇಳಿ ನಾವು 16ನೇ ತಾರೀಖು ಕಂಟೆಪ್ಟ್‌ನ್ನು ತೆಗೆದುಕೊಂಡು ಬರುತ್ತೇವೆ. ಆ ರೀತಿ ನಾವು ನಿಮಗೆ ವಿನಂತೆ ಮಾಡಿಕೊಳ್ಳುವುದೇನೆಂದರೆ, ನಾವು ಮಾಡುತ್ತೇವೆ. ಇಷ್ಟು ದುಡ್ಡನ್ನು ಕೊಡುತ್ತೇವೆ. ಅದು 10 ಕೋಟಿ ಇರಬಹುದು, 15 ಕೋಟಿ ಇರಬಹುದು 50 ಕೋಟಿಯಾಗಬಹುದು

ಒಂದು ನಿರ್ದಿಷ್ಟವಾಗಿ ಹೇಳಿ. ಇಷ್ಟು ಹೊತ್ತಿಗಾಗಲೇ ನೀವು ಮಾಡಬಹುದಾಗಿತ್ತು. It is not a very big issue. ಇರತಕ್ಕಂಥ ಮಾರುಕಟ್ಟೆಗಳೇ 10-15 ಅಥವಾ ನೂಲಿಗೆ ಕೊಡುತ್ತೀರೋ, ರೇಷ್ಮೆಗೆ ಕೊಡುತ್ತೀರೋ ಎನ್ನುವ ಒಂದು ಪಾಲಿಸ ಡಿಸೈಡ್ ಮಾಡಿ. ಯಾವುದಾದರೂ ಒಂದನ್ನು ಇಷ್ಟೋತ್ತಿಗೆ ಈಗಾಗಲೇ ಡಿಸೈಡ್ ಮಾಡಬಹುದಾಗಿತ್ತು. Government is a continuous body. ತಾವು ಆದಷ್ಟು ಬೇಗ ನಿರ್ಧಾರ ತೆಗೆದುಕೊಳ್ಳಬೇಕೆನ್ನುವುದು ನಮ್ಮ ಒತ್ತಾಯ ಸ್ವಾಮಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:– ಮಾನ್ಯ ಅಧ್ಯಕ್ಷರೆ, ಇವರ ಹಣ ಇವರ ಡಿಪಾರ್ಟ್‌ಮೆಂಟ್‌ನಲ್ಲೇ ಇದೆ. ಏನು ಗೂಡು ಮಾರುತ್ತಾರೆ. ಅದಕ್ಕೆ ಕಮಿಷನ್ ಕೊಡುತ್ತಾರೆ. ಇವರು ಕ್ಯಾಬಿನೆಟ್‌ಗೆ ಕೂಡ ಹೋಗಬೇಕಾಗಿಲ್ಲ. ಸುಮಾರು 50 ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಹಣ ಇದೆ. ಇವರು ಮಾರ್ಕೆಟ್ ಫೀ ತೆಗೆದುಕೊಂಡು ಸುಮಾರು 50 ಕೋಟಿಗಿಂತಲೂ ಇನ್ನೂ ಜಾಸ್ತಿಯೇ ಇರಬೇಕೆಂದು ನಾನಂತೂ ಭಾವಿಸುತ್ತೇನೆ. ಈ ಹಣದಿಂದ ಮೊದಲು ಮಾರ್ಕೆಟ್ ಇಂಟರ್‌ವೆನ್‌ಷನ್‌ಗೆ ಹೋಗಿ. ಗೂಡಿಗೆ ಹೋಗಿ, ರೇಷ್ಮೆಗೆ ಹೋಗಿ, ಆಟೋಮೆಟಿಕ್ ಆಗಿ ಕೆ.ಜಿ. ಒಂದಕ್ಕೆ ರೂ. 150 ಆಗುತ್ತದೆ. ಮುಂದೆ ರೂ. 180 ಕೂಡ ಆಗುತ್ತದೆ. ಯಾವಾಗ ಮಾರ್ಕೆಟ್ ರೇಟ್ ಜಾಸ್ತಿ ಆಗುತ್ತದೋ ಆಗ ರೈತರಿಗೂ ಸಂತೋಷವಾಗುತ್ತದೆ ಮತ್ತು ನೂಲು ಬಿಚ್ಚುವವರಿಗೂ ಅನುಕೂಲವಾಗುತ್ತದೆ. ಹಣಕ್ಕೇನೂ ನೀವು ಈ ಸರ್ಕಾರಕ್ಕೆ ಅಂಗಲಾಚಬೇಕಾಗಿಲ್ಲ. ಹಣ ನಿಮ್ಮ ಇಲಾಖೆಯಲ್ಲಿಯೇ ಇದೆ ಸ್ವಾಮಿ ನೀವು ಏಕೆ ಅದನ್ನು ಯೋಚನೆ ಮಾಡುತ್ತೀರಿ? ನಿಮ್ಮ ಡಿಪಾರ್ಟ್‌ಮೆಂಟ್‌ನಲ್ಲಿರುವ ಹಣವನ್ನು ನೀವು ಉಪಯೋಗಿಸಿ ಅದು ರೈತರ ಹಣ, ರೀಲರ್ಸ್ ಹಣ. ಆ ಹಣವನ್ನು ತೆಗೆದುಕೊಂಡು ಮಾಡಿ. ನೀವು ಏಕೆ ಕ್ಯಾಬಿನೆಟ್‌ಗೆ ಹೋಗಬೇಕು? ನೀವು ಇದನ್ನು ನಾಳೆಯಿಂದಲೇ ಮಾರ್ಕೆಟಿಂಗ್ ಇಂಟರವೆನ್‌ಷನ್ ಮಾಡಿ, 18ನೇ ತಾರೀಖು ಹೋದಮೇಲೆ ಅಲ್ಲಿ ಏನು, ಸಾಧಕಬಾಧಕ ಇದೆ ಎನ್ನುವುದನ್ನು ಅಲ್ಲಿ ನೋಡೋಣ. ಆದರೆ ಇಲ್ಲಿ ಸರ್ಕಾರ ಮಾರ್ಕೆಟಿಂಗ್ ಇಂಟರ್‌ವೆನ್‌ಷನ್ ಹೋಗಲೇಬೇಕು, ಇದು ನನ್ನ ಒತ್ತಾಯ. ಇದು ಆಗದೇ ಇದ್ದರೆ ರೈತರು ನಿಜವಾಗಿಯೂ ಉಳಿಯುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇಲ್ಲ. ನಾನು, ನಿನ್ನೆ ಪೇಪರ್‌ನಲ್ಲಿ, ನೇಣು ಹಾಕಿಕೊಳ್ಳುವುದನ್ನು ನೋಡಲು ಕೊಟ್ಟಿದ್ದೆ. ಆ ತರಹದ ಪರಿಸ್ಥಿತಿ ಬರುತ್ತದೆ. ದಯವಿಟ್ಟು ನಾಳೆಯಿಂದಲೇ ಈ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಆಗ್ರಹಿಸುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):– ಮಾನ್ಯ ಅಧ್ಯಕ್ಷರೆ, ಸನ್ಯಾನ್ಯ ಸಿಂಧ್ಯಾರವರು ಸಚಿವರಾಗಿದ್ದವರು, ಹಿರಿಯರು. ಶ್ರೀ ಭೈರೇಗೌಡರು ಮತ್ತು ಅವರು ಆಡಳಿತ ನಡೆಸಿರತಕ್ಕಂಥವರು. ನಾನು ಅಧಿಕಾರ ತೆಗೆದುಕೊಂಡು ಇದೀಗ ಒಂದು ವಾರವಾಗಿದೆ. ಶ್ರೀ ಶ್ರೀನಿವಾಸಗೌಡರು ಹೇಳಿದ ನಿಟ್ಟಿನಲ್ಲಿ ಈಗಾಗಲೇ ಕೆ.ಎಸ್.ಎಫ್. ನಲ್ಲಿ ಇಷ್ಟು ವರ್ಷಗಳಲ್ಲಿ ಅತಿ ಹೆಚ್ಚು ಹಣ 28 ಕೋಟಿ ರೂಪಾಯಿಗಳು ರೇಷ್ಮೆ ದಾಸ್ತಾನನ್ನು ನಾವು ಇವತ್ತು ಕೊಂಡುಕೊಂಡಿದ್ದೇವೆ. ಜೊತೆಗೆ ತಾವು ಕೊಟ್ಟಿದ್ದ ಸಲಹೆಗೆ ನಾನು ಇಲ್ಲವೆಂದು ಹೇಳಲಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಬೇಕಾಗುತ್ತದೆ. ಏಕೆಂದರೆ ಅದರಲ್ಲಿ ಹಣಕಾಸಿನ ವಿಚಾರ ಇರುವುದರಿಂದ ಸ್ವಲ್ಪ ಅವಕಾಶ ಬೇಕಾಗುತ್ತದೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಅಧ್ಯಕ್ಷರು:- ಇದು ಇಲ್ಲಿಗೆ ಮುಗಿಯಿತು. ಈಗ ಮಾನ್ಯ ಶ್ರೀ ಶ್ರೀಕಂಠಯ್ಯನರಿಂದ 'ಬರದ' ವಿಷಯದ ಬಗ್ಗೆ ಉತ್ತರ.

(ಉ) ರಾಜ್ಯದಲ್ಲಿ ಬರ ಪರಿಹಾರದ ಬಗ್ಗೆ ಮಾನ್ಯ ಕಂದಾಯ ಸಚಿವರಿಂದ ಉತ್ತರ

ಶ್ರೀ ಹೆಚ್.ಸಿ ಶ್ರೀಕಂಠಯ್ಯ(ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, ಬರ ಬರತಕ್ಕಂಥದ್ದನ್ನು ಊಹೆ ಮಾಡಿಕೊಂಡು ಅದಕ್ಕೆ ಮುಂಜಾಗ್ರತೆ ಕ್ರಮ ಏನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಶ್ರೀ ಭೈರೇಗೌಡರು ನಿನ್ನೆಯ ದಿವಸ ಭಾಷಣ ಮಾಡಿದ್ದಾರೆ. ಈಗಾಗಲೇ ಎರಡು ಸಲ ಬರಗಾಲ ಬಂದಿದ್ದನ್ನು ನಾವು ನಿಭಾಯಿಸಿದ್ದೇವೆ. ಬಹಳ ಸಕ್ಸಸ್‌ಫುಲ್ ಆಗಿ ನಾವು ನಿಭಾಯಿಸಿದ್ದೇವೆ ಇದು ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಗೊತ್ತಿದೆ. ಅವರ ಊರಿಗೆ ಕುಡಿಯುವ ನೀರಿನ ಸರಬರಾಜನ್ನು ಎಷ್ಟು, ಹೇಗೆ ಅದನ್ನು ಮಾಡಿದ್ದೇವೆನ್ನುವುದು ಅವರಿಗೆ ಪೂರ್ಣವಾಗಿ ಅರಿವಿದೆ. ವಿಧಾನ ಪರಿಷತ್ತಿನಲ್ಲಿ 'ಬರ' ವಿಷಯದ ಮೇಲಿನ ಚರ್ಚೆ ಸಮಯದಲ್ಲಿ ಶ್ರೀ ಎಂ.ಸಿ. ನಾಣಯ್ಯನವರು ಮಾತನಾಡುತ್ತಾ ಒಂದು ಸಲಹೆಯನ್ನು ಕೊಟ್ಟರು. ಅದೇನೆಂದರೆ- 'ರಾಜ್ಯಮಟ್ಟದಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ವಿರೋಧ ಪಕ್ಷದ ನಾಯಕರು ಹಾಗೂ ಕೆಲವು ಮುಖಂಡರು ಒಳಗೊಂಡಂತೆ ಈ ಒಂದು ಬರಗಾಲ ಪರಿಸ್ಥಿತಿ ಹಾಗೂ ಇತರೆ ಸಮಸ್ಯೆಗಳನ್ನು ಪರಿಹಾರ ಮಾಡತಕ್ಕಂಥದ್ದಕ್ಕೆ ಒಂದು ಮಾನಿಟರಿಂಗ್ ಕಮಿಟಿಯನ್ನು ನೇಮಿಸಬೇಕು, ಇದರಿಂದ ಬಹಳ ಅನುಕೂಲವಾಗುತ್ತದೆ. ಆ ಕಮಿಟಿಯಲ್ಲಿ ಇಂಥ ಪರಿಸ್ಥಿತಿಯನ್ನು ಸುಧಾರಣೆ ಮಾಡಿಕೊಳ್ಳುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎನ್ನತಕ್ಕಂಥದ್ದನ್ನು ತೀರ್ಮಾನ ಮಾಡಬಹುದೆಂಬ ಸಲಹೆಯನ್ನು ಕೊಟ್ಟಾಗ, ಖಂಡಿತವಾಗಿಯೂ ಇದು ಉತ್ತಮವಾದ ಸಲಹೆ ಅದಕ್ಕೆ ನನ್ನ ಒಪ್ಪಿಗೆ ಇದೆ ಎನ್ನತಂಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದನ್ನು ನಾನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಈ ರೀತಿಯ ಕಮಿಟಿ ಅದು ಸಾಧ್ಯವೋ ಅಲ್ಲವೋ ಎಂದು ನೀವು ಯೋಚನೆ ಮಾಡಬೇಕು. ಬರ ಬರುವುದಕ್ಕೆ ಮುಂಚೆ ಏನು ಮುಂಜಾಗ್ರತೆಯ ಕ್ರಮ ತೆಗೆದುಕೊಳ್ಳಬೇಕೆಂದು ಬಹಳ ಉತ್ತಮವಾದ ಸಲಹೆಗಳನ್ನು ಶ್ರೀ ಭೈರೇಗೌಡರು, ಶ್ರೀ ಸಿಂಧ್ಯಾರವರು ಶ್ರೀ ಜಗದೀಶ್ ಶೆಟ್ಟರ್‌ರವರು, ಶ್ರೀ ಸೋಮಶೇವರ್‌ರವರು ಇನ್ನೂ ನನ್ನ ಅನೇಕ ಸ್ನೇಹಿತರು ತಿಳಿಸಿದ್ದಾರೆ. ನಾನು ಹೇಳಿದ ಹಾಗೆ ಈಗಾಗಲೇ ಎರಡು ಬರಗಾಲ ಪರಿಸ್ಥಿತಿಯನ್ನು ಎದುರಿಸಿದ್ದೇವೆ. ಆದ್ದರಿಂದ ಅನುಭವಕ್ಕೇನೂ ಕಡಿಮೆ ಇಲ್ಲ. ನಮ್ಮ ಅಧಿಕಾರಿಗಳಿಗೂ ಸಹ ಇಂಥ ಪರಿಸ್ಥಿತಿಯನ್ನು ನಿಭಾಯಿಸತಕ್ಕಂಥದ್ದು, ಮಂತ್ರಿಗಳಿಗೆ, ಸಂಬಂಧಪಟ್ಟಂಥವರಿಗೂ ಸಹ ಎಲ್ಲವೂ ಚೆನ್ನಾಗಿ ಅರಿವಾಗಿದೆ. ಬರಗಾಲ ಬರಬಾರದು ಎನ್ನುವುದು ನಮ್ಮ ಆಸೆ. ಒಂದು ಪಕ್ಷ ಬಂದರೂ ಸಹ ಯಾವರೀತಿಯಾಗಿ ನಾವು ಅದನ್ನು ನಿಭಾಯಿಸಬೇಕೆನ್ನತಕ್ಕಂಥದ್ದಕ್ಕೆ ಈಗಾಗಲೇ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ.

5.10 ಪಿಎಂ

ಅದಕ್ಕೆ ಎಲ್ಲಾ ವ್ಯವಸ್ಥೆಯನ್ನು ಸಹ ಮಾಡುವುದಕ್ಕೆ ನಾವು ಏರ್ಪಾಡು ಮಾಡುತ್ತಿದ್ದೇವೆ. ಹಿಂದೆ ಬರಗಾಲ ಬಂದಾಗ ಅದಕ್ಕೆ ಸಾಕಷ್ಟು ಹಣವನ್ನು ರಾಜ್ಯಸರ್ಕಾರ ಖರ್ಚು ಮಾಡಿದೆ. ನಮ್ಮ ಸರ್ಕಾರಕ್ಕೆ ಬರಬೇಕಾದ ಪಾಲು ಕೇಂದ್ರದಿಂದ ಬಂತೇ ಹೊರತು ಅದಕ್ಕಿಂತ ಹೆಚ್ಚಿನ ಹಣ ಅಲ್ಲಿಂದ ದೊರೆಯಲಿಲ್ಲ. ಒಂದು ಲಕ್ಷ ಟನ್ 'ಕೂಲಿಗಾಗಿ ಕಾಳು' ಎನ್ನತಕ್ಕಂಥದ್ದನ್ನು ಪುಕ್ಕಟೆಯಾಗಿ ಕೊಟ್ಟರು. ಅದರಿಂದಲೂ ಸಹ ಬಹಳ ಅನುಕೂಲವಾಯಿತು.